ಓಎಸ್ ನಂಬರಃ 116/2001
ಡಿಡಬ್ಲೂ-1

ದಿಃ 21-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ 7, 12 ಮತ್ತು 13 ಪರ ವಕೀಲರಿಂದಃ**

ಪ್ರತಿವಾದಿ 7,12 ಮತ್ತು 13 ಕೇರೂರ ಗ್ರಾಮದವರು ಎಂದರೆ ಸರಿ ಅವರ ಬಗ್ಗೆ ನನಗೆ ಪರಿಚಯ ಇದೆ. ಸರ್ವೆ ನಂಬರ 132 ಮತ್ತು 131/2 ಮೂಲತಃ 1 ನೇ ಪ್ರತಿವಾದಿಯ ಮನೆತನಕ್ಕೆ ಸೇರಿದ ಜಮೀನುಗಳು ಎಂದರೆ ಸರಿ. ಸದರಿ 132 ರಲ್ಲಿ ಸದರಿ ಕೃಷ್ಣಾರವರಿಗೆ 1/3 ಅಂಶ ಭಾಗ ಇದೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿ ಸದರಿ ಆಸ್ತಿಯನ್ನು ತನ್ನ ಪ್ರಾಪಂಚಿಕ ಮತ್ತು ಕುಟುಂಬದ ಅಡಚಣೆಗಾಗಿ ಪ್ರತಿವಾದಿ 12 ಮತ್ತು 13 ರವರಿಗೆ ಮಾರಾಟ ಮಾಡಿದರು ಎಂದರೆ ಸರಿ. ಅದರಂತೆ ಅವರ ಹೆಸರಿಗೆ ಮ್ಯುಟೇಷನ ಆಗಿ ಅವರು ವಹಿವಾಟಿಯಲ್ಲಿ ಇದ್ದಾರೆ ಎಂದರೆ ಸರಿ. ಸದರಿ 13 ನೇ ಪ್ರತಿವಾದಿ ತಾನು ಕ್ರಯಕ್ಕೆ ಪಡೆದ ಜಮೀನನಲ್ಲಿ ಕೊಳವೆ ಬಾವಿ ಹಾಗೂ ಬಾವಿ ತೆಗೆದು ಪೈಪಲೈನ ಮುಖಾಂತರ ನೀರಾವರಿ ವ್ಯವಸ್ಥೆ ಮಾಡಿಕೊಂಡು ಅದನ್ನು ಡೆವಲಫ್ ಮಾಡಿದ್ದಾರೆ ಎಂದರೆ ಸರಿ. ಅದಕ್ಕೆ ಸಾಕಷ್ಟು ಖರ್ಚು ಮಾಡಿದ್ದಾರೆ ಎಂದರೆ ಸರಿ. ಆತ ಕ್ರಯಕ್ಕೆ ಪಡೆದ ನಂತರ ಸದರ ಸರ್ವೆ ನಂಬರ 132 ರಲ್ಲಿ 1980 ರಲ್ಲಿ ಮನೆ ಕಟ್ಟಿ ಆತ ಬದುಕಿರುವವರೆಗೂ ಅಲ್ಲೇ ವಾಸವಾಗಿದ್ದ ಎಂದರೆ ಸರಿ. ಸದರಿ ಮನೆಯಲ್ಲಿ ಈಗ ಆತನ ವಾರಸುದಾರರು ಇದ್ದಾರೆ ಎಂದರೆ ಸರಿ.

ಅದೇ ರೀತಿ 12 ನೇ ಪ್ರತಿವಾದಿಯು ಸಹ ಬಾವಿ ತೆಗೆದು ನೀರಾವರಿ ವ್ಯವಸ್ಥೆ ಮಾಡಿಕೊಂಡು ಅಲ್ಲಿಯೇ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸದರಿ 12 ನೇ ಪ್ರತಿವಾದಿ ತಾನು ತೀರಿಕೊಳ್ಳುವ ಮೊದಲು ಆ ಜಮೀನನ್ನು 7 ಪ್ರತಿವಾದಿ ತನ್ನ ಮಗಳಿಗೆ ಮಾಡಿದ್ದಾರೆ ಎಂದರೆ ಸರಿ. ಸದರಿ ಮನೆಯಲ್ಲಿ 7 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ವಾಸವಾಗಿದ್ದಾರೆ ಎಂದರೆ ಸರಿ. 12 ನೇ ಪ್ರತಿವಾದಿ ಆ ಆಸ್ತಿಯನ್ನು ದಿನಾಂಕ 16/04/1980 ರಂದು 1 ನೇ ಪ್ರತಿವಾದಿಯ ಕಡೆಯಿಂದ ಸರ್ವೆ ನಂಬರ 131/2 ಖರೀದಿ ಹಿಡಿದರು ಎಂದರೆ ಸರಿ. ಆ ಪ್ರಕಾರ ಅವರ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿದೆ ಎಂದರೆ ಸರಿ. ಸದ ರಿ ಪ್ರತಿವಾದಿ 12 ಅಲ್ಲಿ ಕಬ್ಬಿನ ಬೆಳೆ ಬೆಳೆದು ಸಕ್ಕರೆ ಖಾರ್ಕಾನೆಗೆ ಕಳುಹಿಸುತ್ತಿದ್ದರು ಎಂದರೆ ಸರಿ. ಸರ್ವೆ ನಂಬರ 131/1 ಮತ್ತು 132 ಪ್ರತಿವಾದಿ 12 ಮತ್ತು 13 ರವರ ಮಾಲ್ಕಿ ಕಬ್ಜಾ ವಹಿವಾಟನ ಜಮೀನುಗಳಾಗಿದ್ದು ಅದರಲ್ಲಿ ಪಾಲು ವಿಭಾಗ ಆಗಬೇಕಾಗಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ